## ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್. ಸಿ. ನ್ಯಾಯಾಲಯ ಬೇಲೂರು.

ಕ್ರಿಮಿನಲ್ ಮಿಸ್ **ನಂ** : 224/2019 **ದಿನಾಂಕ** : 17-08-2022
ಪಿ.**ಡಬ್ಲ್ಯೂ** : 1

**:ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು:**

*******

ಪಾಟೀ ಸವಾಲು: ಎದುರುದಾರರ ಪರ ವಕೀಲರಾದ ಶ್ರೀ **ಬಿ ಎಸ್ ಪಿ ಕೆ** ರವರಿಂದ:

ನಾನು ಎಸ್ ಎಸ್ ಎಲ್ ಸಿ ಅನುತೀರ್ಣಳಾಗಿರುತ್ತೇನೆ. ಎದುರುದಾರರು ನನ್ನ ಹತ್ತಿರದ ಸಂಬಂಧಿಕರೆಂದರೆ ಸರಿ. ಅವರನ್ನು ನಾನು ಸಣ್ಣವಳಿದ್ದಾಗಿನ್ನಿಂದಲೂ ಅವರೊಂದಿಗೆ ಆಟಾಡಿ ಬೆಳದಿರುತ್ತೇನೆ. ಎದುರುದಾರರಿಗೆ ಕಣ್ಣು ಸರಿಯಾಗಿ ಕಾಣದ ಸಮಸ್ಯೆ ಇರುತ್ತದೆ ಎಂದರೆ ಸರಿಯಲ್ಲ. ಈ ಕಾರಣಕ್ಕಾಗಿ ಅವರಿಗೆ ಮೂರು ಬಾರಿ ಕಣ್ಣಿನ ಶಸ್ತ್ರ ಚಿಕಿತ್ಸೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಂಗನ್ಯೂನತೆ ಆಧಾರದ ಮೇಲೆ ಎದುರುದಾರರಿಗೆ ಸರ್ಕಾರಿ ಕೆಲಸ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮದುವೆಯಾದ ನಂತರ ನಾನು ಎದುರುದಾರರ ಜೊತೆ ಕಡೂರಹಳ್ಳಿಯಲ್ಲಿ ಸುಮಾರು 4 ವರ್ಷಗಳ ಕಾಲ ವಾಸವಾಗಿದ್ದೇನು ಎಂದರೆ ಸರಿ. ಆನಂತರ ಎದುರುದಾರರದ ನನ್ನ ಗಂಡನಿಗೆ ನೌಕರಿ ಸಿಕ್ಕಿರುತ್ತದೆ ಎಂದರೆ ಸರಿ. ನಂತರ ನಾವು ಶಿವಮೊಗ್ಗಕ್ಕೆ ಹೋಗಿ 2-3 ವರ್ಷ ಸಂಸಾರ ಮಾಡಿರುತ್ತೇವೆ. ಅಲ್ಲಿಯವರೆಗೂ ನಮ್ಮ ಸಂಸಾರದಲ್ಲಿ ಯಾವುದೇ ಸಮಸ್ಯೆ ಇರಲ್ಲಿಲ್ಲ ಎಂದರೆ ಸಾಕ್ಷಿಯೂ ಶಿವಮೊಗ್ಗಕ್ಕೆ ಹೋದ ನಂತರ ಚೆನ್ನಾಗಿದ್ದೆವು ಎಂದು ಉತ್ತರಿಸುತ್ತಾರೆ.

2. ನಮ್ಮ ಮೊದಲನೇ ಮಗುವಿನ ಜನನ ಕಡೂರಿನ ಸತ್ಯ ಸಾಯಿ ಖಾಸಗಿ ಆಸ್ಪತ್ರೆಯಲ್ಲಿ ಆಗಿರುತ್ತದೆ ಎಂದರೆ ಸರಿ. 2ನೇ ಮಗು ಶಿವಮೊಗ್ಗದ ಆಸ್ಪತ್ರೆಯಲ್ಲಿ ಜನಿಸಿರುತ್ತದೆ ಎಂದರೆ ಸರಿ. ನನ್ನ ತಂದೆಯವರು ಮೊದಲು ವ್ಯಾಪಾರ ಮಾಡುತ್ತಿದ್ದು ಈಗ ವಯಸ್ಸಾದ ಕಾರಣ ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರದ 3ನೇ ಪ್ಯಾರದಲ್ಲಿ ಹೇಳಿರುವಂತೆ ಎದುರುದಾರರಿಗೆ ಮತ್ತು ನನಗೆ ಬಂಗಾರ ಕೊಟ್ಟ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪರಿಚಯ ಇದ್ದವರ ಜೊತೆ ಕುಟುಂಬದಲ್ಲೇ ಮದುವೆಯಾದ ಕಾರಣ ಯಾವುದೇ ದಾಖಲೆ ಇಟ್ಟಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ ಮೂರು ಲಕ್ಷ ರೂಪಾಯಿ ಮದುವೆ ಖರ್ಚು ಮಾಡಿರುತ್ತಾರೆ ಎಂದು ತೋರಿಸಲು ದಾಖಲೆ ಹಾಜರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯೂ ಮನೆಯ ಹತ್ತಿರ ಮದುವೆ ಮಾಡಿದ ಕಾರಣ ಯಾವುದೇ ದಾಖಲೆ ಇಲ್ಲ ಎಂದು ನುಡಿಯುತ್ತಾರೆ, ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದು ಅದರಲ್ಲಿರುವ ವಿಚಾರಗಳು ನನಗೆ ತಿಳಿದಿದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 2ನೇ ಪುಟದಲ್ಲಿ 31 ಸಾವಿರ ರೂಪಾಯಿ ಎಂದು ಬರೆದಿದ್ದು ಮೊದಲು ಬರುತ್ತಿದ್ದ ಸಂಬಳ ಮತ್ತು 4ನೇ ಪುಟದಲ್ಲಿ 41,990/- ಎಂದು ಬರೆದಿರುವುದು ಈಗ ಬರುತ್ತಿರುವ ಸಂಬಳ ಆಗಿರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಎದುರುದಾರರು ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾರೆ ಎಂದು ಪೊಲೀಸ್ ಠಾಣೆಯಲ್ಲಿ ಯಾವುದೇ ದೂರು ನೀಡಿರುವುದಿಲ್ಲ.

3. ಈ ಅರ್ಜಿಯನ್ನು ದಾಖಲಿಸಿದ ನಂತರ ಹಿರೇಗೌಜ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಎದುರುದಾರರಿಗೆ ಬಾಯಿಗೆ ಬಂದಂತೆ ಬೈದಿರುತ್ತೇನೆ ಎಂದು ಸಕರಾಯಾಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿತ್ತು ಎಂದರೆ ಸರಿ.

ಆಗ ನನ್ನನ್ನು ಠಾಣೆಗೆ ಕರೆಸಿ ನನ್ನ ಹೇಳಿಕೆ ಪಡೆದಿದ್ದರು ಎಂದರೆ ಸರಿ. ಸಾಕ್ಷಿ ಈಗ ಸದರಿ ದೂರಿಗೆ ಸಂಬಂಧಿಸಿದ ದೂರು, ಸ್ವೀಕೃತಿಗಳು ಹಾಗೂ ತನ್ನ ಹೇಳಿಕೆಯನ್ನು ಹಾಗೂ ಅದರಲ್ಲಿನ ಸಹಿಯನ್ನು ನೋಡಿ ಗುರುತಿಸಿ ತನ್ನದೆ ಎಂದು ಒಪ್ಪಿಕೊಳ್ಳುತ್ತಾರೆ. ಆದ ಕಾರಣ ಅವುಗಳನ್ನು ಕ್ರಮವಾಗಿ ನಿಆರ್-1 ರಿಂದ ನಿಆರ್-4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ಪೋಟೋ ತೋರಿಸಲಾಗಿ ನಾನು ನನ್ನ ಗಂಡ ನನ್ನ ಮಕ್ಕಳು ಇರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು ನಿಆರ್-5 ಎಂದು ಗುರುತಿಸಲಾಯಿತು. ಸದರಿ ಪೋಟೋದಲ್ಲಿ ನನ್ನ ಗಂಡನ ಎಡ ಭಾಗದಲ್ಲಿ ಇರುವುದು ನನ್ನ ಗಂಡನ ಸ್ನೇಹಿತ ರವಿ ಮತ್ತು ನನ್ನ ಗಂಡನ ಬಲ ಭಾಗದಲ್ಲಿ ಇರುವ ಹೆಂಗಸಿನ ಹೆಸರು ಚೈತ್ರ ಇರಬಹುದು ಅವರು ನನ್ನ ಗಂಡನ ಸ್ನೇಹಿತೆ.

4. ನಾನು ಹಳೇಬೀಡಿನ ಹೊಯ್ಸಳ ಶಾಲೆಯ ಪಕ್ಕ ಪೊಲೀಸ್ ರಾಜಣ್ಣ ಎಂಬುವವರ ಮನೆಯಲ್ಲಿ ವಾಸವಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ಪೋಟೋ ತೋರಿಸಿ ಅದೇ ಮನೆಯಲ್ಲಿ ತಾನು ವಾಸವಿರುದಾಗಿ ಒಪ್ಪಿಕೊಳ್ಳುತ್ತಾರೆ ಸದರಿ ಪೋಟೋವನ್ನು ನಿಆರ್-6 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ಪೋಟೋ ತೋರಿಸಲಾಗಿ ಅದರಲ್ಲಿ ಇರುವುದು ತನ್ನ ತಮ್ಮ ಹಾಗೂ ಅದು ತನ್ನ ತಂದೆ ತಾಯಿಯ ಮನೆ ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು ನಿಆರ್-7 ಎಂದು ಗುರುತಿಸಲಾಯಿತು. ನನ್ನ ಗಂಡನಿಗೆ ಬೈಕ್ ಚಲಾಯಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಬರುತ್ತದೆ ಎಂದು ನುಡಿಯುತ್ತಾರೆ, ನನ್ನ ಗಂಡನ ಹೆಸರಿನಲ್ಲಿ ಯಾವುದೇ ಬೈಕ್ ಇರುವುದಿಲ್ಲ. ನಾವು ಶಿವಮೊಗ್ಗಕ್ಕೆ ಹೋದಾಗ ನನ್ನ ಗಂಡನ ಸ್ನೇಹಿತ ರವಿರವರು ಅಲ್ಲಿ ವಸತಿ ಮತ್ತು ಓಡಾಟದ ವ್ಯವಸ್ಥೆ ಮಾಡಿದ್ದರು ಎಂದರೆ ಸರಿಯಲ್ಲ. ಶಿವಮೊಗ್ಗದಲ್ಲಿ ರಜಾ ಕಾಲದಲ್ಲಿ ನಮ್ಮ ಕುಟುಂಬ ಮತ್ತು ರವಿರವರ ಕುಟುಂಬ ಪ್ರವಾಸಕ್ಕೆ ಹೋಗುತ್ತಿದ್ದೇವು ಎಂದರೆ ಸರಿಯಲ್ಲ. ಶಿವಮೊಗ್ಗದಿಂದ ಕಾಲಿ ಮಾಡಿಕೊಂಡು ಬಂದು ಕಡೂರಹಳ್ಳಿಯಲ್ಲಿ 2 ವರ್ಷಗಳ ಕಾಲ ವಾಸವಿದ್ದೇವು. ಯಾವ ಇಸವಿಯಲ್ಲಿ ಶಿವಮೊಗ್ಗದಿಂದ ಬಂದೆವು ಎಂದು ನನಗೆ ಗೂತ್ತಿಲ್ಲ. ನನ್ನ ಗಂಡನಿಗೆ 2013-14 ರಲ್ಲಿ ಕೆಲಸ ದೊರೆತಿರುತ್ತದೆ. ನಮ್ಮ ಜೊತೆ ನನ್ನ ಗಂಡನ ತಂದೆ ತಾಯಿ ಶಿವಮೊಗ್ಗದಲ್ಲಿ ವಾಸವಿರಲಿಲ್ಲ. ಅಲ್ಲಿ ನಾನು ನನ್ನ ಗಂಡ ಮತ್ತು ಮಕ್ಕಳು ವಾಸವಿದ್ದೆವು ಎಂದರೆ ಸರಿ. ನನ್ನ ಗಂಡನ ಅಕ್ಕನ ಮಕ್ಕಳು ಶಿವಮೊಗ್ಗದಲ್ಲಿ ಪ್ರಸಕ್ತ ಸಾಲಿನಿಂದ ಓದುತ್ತಿದ್ದಾರೆ. ನನ್ನ ಗಂಡನ ಅಕ್ಕನ ಮಕ್ಕಳು 5 ವರ್ಷದಿಂದಲೂ ಶಿವಮೊಗ್ಗದಲ್ಲಿ ಓದುತ್ತಿದ್ದಾರೆ ಎಂದರೆ ಸರಿಯಲ್ಲ.

5. ನಾವು ಕಡೂರಹಳ್ಳಿಯಲ್ಲಿದ್ದಾಗ ಎದುರುದಾರರಿಗೆ ತಂದೆ ತಾಯಿಗೆ ಯಾವುದೇ ಅಡುಗೆ ಕೆಲಸ ಮಾಡಿಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರಿನಲ್ಲಿ ಮೂರು ಎಕರೆ ಅಡಿಕೆ ತೋಟ ಇರುತ್ತದೆ ಎಂದು ನಾನು ಹೇಳಿದ್ದು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. ಸಾಕ್ಷಿಯೂ ಹಾಜರು ಮಾಡುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರರ ತಂದೆ ತಾಯಿಗೆ ವೆಯಸ್ಸಾಗಿರುತ್ತದೆ ಎಂದರೆ ಸರಿ. ಎದುರುದಾರರು ಒಬ್ಬರೆ ದುಡಿಯುತ್ತಿರುವುದರಿಂದ ಅವರ ತಂದೆ ತಾಯಿಯನ್ನು ಸಾಕುವ ಜವಬ್ದಾರಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತನ್ನ ಮಾವನಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ದಿಃ15-03-2019 ರಂದು ನನ್ನನ್ನು ಮತ್ತು ನನ್ನ ಮಕ್ಕಳನ್ನು ನಿಂದಿಸಿ ಎದುರುದಾರರು ಮನೆಯಿಂದ ಹೊರ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದು ನಾನೇ ಸ್ವತಃ ಮನೆ ಬಿಟ್ಟು ಹಳೇಬೀಡಿಗೆ ಬಂದು ನೆಲೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಕೂಲಿ ಕೆಲಸ ಮಾಡುತ್ತಿರುತ್ತಾರೆ. ನನ್ನ ತಂದೆ ತಾಯಿ ಸಹ ಕೂಲಿ ಕೆಲಸ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸ್ ರಾಜಣ್ಣರವರ ಮನೆಯಲ್ಲಿ ನಂಬಿಕೆ ಆಧಾರದ ಮೇಲೆ ಇರುತ್ತೇನೆ. ಯಾವುದೇ ಬಾಡಿಗೆ ಕರಾರು ಆಗಿರುವುದಿಲ್ಲ. ಎದುರುದಾರರು ನಮ್ಮ ಎಲ್ಲಾ ಮೂಲ ಸೌಕರ್ಯಗಳನ್ನು ನೋಡಿಕೊಳ್ಳುತ್ತಿದ್ದರು ಯಾವುದೇ ಸಕಾರಣ ಇಲ್ಲದೇ ನಾನೇ ಮನೆ ಬಿಟ್ಟು ಬಂದಿರುತ್ತೇನೆ ಎಂದರೆ ಸರಿಯಲ್ಲ.

6. ದಿ:12-11-2019 ರಲ್ಲಿ ಶಿವಮೊಗ್ಗದ ಮಹಿಳಾ ಠಾಣೆಯಲ್ಲಿ ನನ್ನ ವಿರುದ್ಧ ಒಂದು ಪ್ರಕರಣ ದಾಖಲಾಗಿತ್ತು ಎಂದರೆ ಸುಳ್ಳು. ಸದರಿ ಪ್ರಕರಣದಲ್ಲಿ ನನ್ನನ್ನು ವಿಚಾರಣೆಗಾಗಿ ಕರೆಸಿದ್ದರು ಎಂದರೆ ಸರಿಯಲ್ಲ. ದಿ:12-11-2019 ರಂದು ರವಿರವರ ಹೆಂಡತಿ ಚೈತ್ರಾರವರು ಅವರ ಗಂಡನ ವಿರುದ್ಧ ನನ್ನನ್ನು ಸೇರಿಸಿ ದೂರು ನೀಡಿದ್ದು ಅದಕ್ಕೆ ಸಂಬಂಧಿಸಿದಂತೆ ನಾನು ಹೋಗಿದ್ದು ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸುಳ್ಳು. ನನ್ನ ಗಂಡ ಕಡೂರಿನ ನ್ಯಾಯಾಲಯದಲ್ಲಿ ವಿಚ್ಛೇಧನ ಕೋರಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತೇನೆ ಎಂದರೆ ಸರಿ. ಪ್ರಸ್ತುತ ನಾನು ಟೈಲರಿಂಗ್ ಕೆಲಸ ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನನ್ನು ಬಿಟ್ಟು ಬಂದಿರುವ ಕಾರಣ ಅವರಿಗೆ ಮತ್ತು ಅವರ ತಂದೆ ತಾಯಿಯನ್ನು ನೋಡಿಕೊಳ್ಳಲು ಒಬ್ಬರನ್ನು ನೇಮಕ ಮಾಡಿರುವ ಕಾರಣ ಅವರಿಗೆ ತೊಂದರೆಗಳಿದ್ದು ನಾನು ಕೇಳಿದ ಮಾಸಿಕ ರೂ. 40,000/- ಗಳನ್ನು ನೀಡಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಳ್ಳಲು ಸಿದ್ದರಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರಿಗೆ ಆರೋಗ್ಯ ಸರಿಯಿಲ್ಲದ ಕಾರಣ ವೈದ್ಯಕೀಯ ವೆಚ್ಚಗಳು ಇರುತ್ತದೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದು ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ**

(ಪ್ರಸನ್ನಕುಮಾರ್ ಪಿ.)
**ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ. ಎಂ. ಎಫ್. ಸಿ. ನ್ಯಾಯಾಲಯ ಬೇಲೂರು.**

Case called.

**Civil Judge and JMFC, Belur.**